# ಬಿರುಬಿಸಿಲಿನಲ್ಲೊಂದು ತಂಪುಮರ

ರಾಜಾರಾಮ ಹೆಗಡೆ

ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ

ಕುವೆಂಪು ವಿಶ್ವವಿದ್ಯಾನಿಲಯ

ನಾನು ರಾಘವೇಂದ್ರ ಪಾಟೀಲರನ್ನು ೧೯೯೦ರ ದಶಕದಲ್ಲಿ ಭೇಟಿಯಾಗುವುದಕ್ಕೂ ಪೂರ್ವದಲ್ಲಿಯೇ ಅವರ ಕಥೆಗಳನ್ನು ಓದಿದ್ದೆ. ಆಗ ನನಗೂ ಕಥೆಗಾರನಾಗುವ ಹುಚ್ಚಿತ್ತು. ಆದರೆ ರಾಘವೇಂದ್ರ ಪಾಟೀಲ, ಜಯಂತ ಕಾಯ್ಕಿಣಿಯವರಂಥವರ ಕಥೆಗಳನ್ನು ಓದಿದಾಗ ಇದು ನನಗೆಟುಕುವ ಕೆಲಸವಲ್ಲ ಎಂಬುದಾಗಿ ನಿರ್ಣಯಿಸಿದ್ದೆ. ನಂತರ ಹಲವಾರು ಕವನಗಳನ್ನೂ ಬರೆದೆ. ಅವುಗಳಲ್ಲಿ ಕೆಲವು ಪ್ರಕಟವೂ ಆಗಿದ್ದವು. ಕವಿಯಾಗುವ ಭ್ರಮೆಯಲ್ಲಿಯೂ ಕೆಲವು ದಿನ ತಿರುಗಾಡಿದೆ. ಜೀವನದ ಮದ್ಯಾಹ್ನವೇರುತ್ತಿದ್ದಂತೆ ಆ ಭ್ರಮೆಯೂ ಮಂಜಿನಂತೆ ಕರಗಿತು. ಬಹುಶಃ ಇದು ಕನ್ನಡಿಗರ ಸೌಭಾಗ್ಯವೂ ಆಗಿರಬಹುದು. ನನಗೆ ಕಥೆ ಕವನಗಳ ಕಲಾತ್ಮಕತೆಯ ಕುರಿತು ಮಾತನಾಡಲು ಬರುವುದಿಲ್ಲ. ಅದನ್ನು ಓದಿದರೆ ಅದು ನನ್ನನ್ನು ಸೆಳೆದುಕೊಳ್ಳುತ್ತದೆಯೋ ಇಲ್ಲವೋ ಅಷ್ಟೇ ತಿಳಿಯುತ್ತದೆ. ಪಾಟೀಲರ ಕಥೆಗಳಲ್ಲಿ ಸೂಸುವ ಉತ್ತರ ಕರ್ನಾಟಕದ ಸೊಗಡು ನನಗೆ ಬಹಳ ಇಷ್ಟ. ಅವರ ಕಥೆಗಳನ್ನು ಪ್ರವೇಶಿಸಿದಾಗ ಅಲ್ಲಿನ ಉತ್ತರ ಕರ್ನಾಟಕದ  ಹಳ್ಳಿಗಳ ಪಾತ್ರಗಳು ಇವರ ಕಥಾಲೋಕದಲ್ಲಿ ಉಳಿದು ಹೋಗುವ ಸಲುವಾಗಿ ತಂತಮ್ಮ ಕಥೆಗಳನ್ನು ಕಟ್ಟಿಕೊಂಡು ಬಂದ ನಂಟರಂತೆ ನನಗೆ ಕಾಣುತ್ತಿದ್ದವು. ಹಾಗಾಗಿ ಪಾಟೀಲರ ಕಥೆಗಳನ್ನು ಪ್ರವೇಶಿಸುವುದೆಂದರೆ ನನಗೆ ಅವರ ಮನೆಯನ್ನು ಪ್ರವೇಶಿಸಿದಷ್ಟೇ ಆತ್ಮೀಯ ಅನುಭವ.

ಆದರೆ ನನಗಾದ ಸೋಲಿನ ಸೇಡನ್ನು ನಾನು ವೈಚಾರಿಕ ಲೇಖನಗಳನ್ನು ಬರೆದು ತೀರಿಸಿಕೊಳ್ಳತೊಡಗಿದೆ. ಅದರಿಂದ ಕನ್ನಡಮ್ಮನ ಪರಿಸ್ಥಿತಿ ಏನಾಯಿತು ಎಂಬುದರ ಕುರಿತು ತಿಳಿದುಕೊಳ್ಳುವ ಮೂಡಿನಲ್ಲಿ ಸದ್ಯಕ್ಕೆ ನಾನಿಲ್ಲ ಅಂತಿಟ್ಟುಕೊಳ್ಳಿ. ನನಗಂತೂ ಅದರಿಂದ ಬಹಳ ಲಾಭಗಳಾದವು ಅಂತ ಹೇಳಬಲ್ಲೆ. ಒಂದು ಲಾಭವೆಂದರೆ ರಾಘವೇಂದ್ರ ಪಾಟೀಲರ ಸಖ್ಯ. ನಾನೂ ಕಥೆಗಾರನಾಗಿಬಿಟ್ಟಿದ್ದರೆ ಈ ಲಾಭವಾಗುತ್ತಿತ್ತೆ? ಎಂಬ ಸಂದೇಹ ನನ್ನಲ್ಲಿದೆ. ನಾನು ಲೇಖನಗಳನ್ನು ಬರೆಯುತ್ತಿದ್ದುದರಿಂದ ಸಂವಾದ ಎಂಬ ಪತ್ರಿಕೆಯನ್ನು ಹೊರತರುತ್ತಿದ್ದ ಪಾಟೀಲರಿಗೆ ನನ್ನ ಬಗ್ಗೆ ವಿಶೇಷ  ಆಕರಾಸ್ಥೆ ಮೂಡಿರಲಿಕ್ಕೂ ಸಾಕು. ಈ ಪತ್ರಿಕೆಗಳನ್ನು ತರುವವರ ಸಂಕಷ್ಟಗಳನ್ನು ನಾನೂ ಅನುಭವಿಸಿ ಬಲ್ಲೆ. ಸಕಾಲದಲ್ಲಿ ಬರೆದುಕೊಡುವ ಲೇಖಕರು ಸಿಕ್ಕಿದರೆ ನಮ್ಮ ಅರ್ಧ ಕೆಲಸವಾದಂತೇ. ಅಂಥವರು ನಮ್ಮ ಪರಮ ಹಿತೈಷಿಗಳಂತೆ, ಮರುಭೂಮಿಯಲ್ಲಿ ಓಯಾಸಿಸ್ಸುಗಳಂತೆ ಕಾಣಿಸಿದರೂ ಹೆಚ್ಚಲ್ಲ. ಪಾಟೀಲರು ಆಗಾಗ ನನಗೆ ಫೋನಾಯಿಸಿ ಲೇಖನಗಳನ್ನು ಬರೆದುಕೊಡುವಂತೆ ಕೇಳುತ್ತಿದ್ದರು. ಆಗೆಲ್ಲ ನಾನೊಬ್ಬ ಪತ್ರಿಕಾಕರ್ತರಿಗೆ ಬೇಕಾದ ಲೇಖಕನೆಂಬುದನ್ನು ನನ್ನ ಅನುಭವದ ಹಿನ್ನೆಲೆಯಿಂದ ಅರಿತು ನನ್ನ ಬಗ್ಗೆ ಆತ್ಮವಿಶ್ವಾಸ ಬೆಳೆಸಿಕೊಳ್ಳತೊಡಗಿದೆ. ಅವರ ಪತ್ರಿಕೆಯಲ್ಲಿ ನಾನು ಕುವೆಂಪು, ಕಾರಂತ, ಭೈರಪ್ಪ ಮುಂತಾದ ಕನ್ನಡ ಲೇಖಕರ ಕುರಿತು ಬರೆದೆ. ನಾನು ಲೇಖಕನಾಗಿ ಬೆಳೆಯುವುದರಲ್ಲಿ ಹಾಗೂ ಕನ್ನಡ ಓದುಗರಿಗೆ ಪರಿಚಯವಾಗುವುದರಲ್ಲಿ ಸಂವಾದ ಪತ್ರಿಕೆಯು ಸಾಕಷ್ಟು ಸಹಕರಿಸಿದೆ. ಅದಕ್ಕಿಂತಲೂ ಮುಖ್ಯವಾಗಿ ಆನಂದ ಕಂದ ಗ್ರಂಥಮಾಲೆ ಆ ಕೆಲಸವನ್ನು ಮಾಡಿದೆ.

ನನ್ನ ಲೇಖನಗಳ ಎರಡು ಸಂಕಲನಗಳು ಆನಂದಕಂದ ಪ್ರಕಾಶನದಿಂದ ಹೊರಬಂದವು. ವಾಡಿಕೆಯಂತೆ ಮೊದಲನೆಯ ಡೆಲಿವರಿ ಬಹಳ ತ್ರಾಸದಾಯಕವಾಗಿತ್ತು. ಎರಡನೆಯದು ಸ್ವಲ್ಪ ಸುಸೂತ್ರ. ನನ್ನ ಲೌಕಿಕ ಅಲೌಕಿಕ ಸಂಕಲನದ ಲೇಖನಗಳನ್ನು ಕಳುಹಿಸಿ ಅವು ಟೈಪಾಗಿ ಬಂದು ಒಂದೆರಡು ಬಾರಿ ತಿದ್ದಿ ಕಳುಹಿಸಿದ ನಂತರ ಒಂದು ದಿನ ಪಾಟೀಲರಿಂದ ಆಘಾತಕಾರಿ ಸುದ್ದಿ ಬಂತು. ಇದುವರೆಗೆ ಮಾಡಿದ ಕರಡು ಪ್ರತಿಗಳನ್ನು ಸಂಗ್ರಹಿಸಿಟ್ಟಿದ್ದ ಕಂಪ್ಯೂಟರ್ ಆಪರೇಟರನು ಓಡಿಹೋಗಿದ್ದಾನೆ ಎಂಬುದಾಗಿ ಮೊದಲ ಕಂತಿನಲ್ಲಿ ತಿಳಿಸಿದ ಪಾಟೀಲರು ಆ ಬರವಣಿಗೆಗಳೆಲ್ಲ ಅಳಿಸಿಹೋಗಿವೆ ಎಂಬ ಎರಡನೆಯ ಕಂತಿನ ಸುದ್ದಿಯನ್ನು ತಿಳಿಸುವ ವೇಳೆಗೆ ನಾನು ಸುಸ್ತು ಹೊಡೆದು ಕುಳಿತಿದ್ದೆ. ಈ ಘಟನೆಯಿಂದ ಎಷ್ಟೆಷ್ಟು ಹಾನಿಯಾಗಿದೆ ಎಂಬುದು ಭೂಕಂಪದ ನಂತರದ ದಿನಗಳಲ್ಲಿ ತಿಳಿದುಬರುವಂತೆ ಕ್ರಮ–ಕ್ರಮೇಣವಾಗಿ ವೇದ್ಯವಾಗತೊಡಗಿತು. ಒಂದು ದಿನ ಪಾಟೀಲರು ಕೆಲವು ಲೇಖನಗಳನ್ನು ಮತ್ತೆ ಕಳುಹಿಸುತ್ತೀರಾ? ಎಂಬುದಾಗಿ ಕೇಳಿದಾಗ ನನಗೆ ಕಣ್ಣಿನಲ್ಲಿ ನೀರು ಬರುವುದೊಂದು ಬಾಕಿ. ಸರಿ, ಮತ್ತೆ ಮೊದಲಿನಿಂದ ತಿದ್ದುವುದು, ಇತ್ಯಾದಿ ಕಾರ್ಯಕ್ರಮ ಪ್ರಾರಂಭವಾಯಿತು. ಅದನ್ನು ಟೈಪ್ ಮಾಡಿದವರು ನಾನು ಈ ಬರವಣಿಗೆಯ ಜೀವನವನ್ನು ಆದಷ್ಟು ಬೇಗ ನಿಲ್ಲಿಸಲಿ ಎಂಬ ರೊಚ್ಚಿನಿಂದ ಆ ಕೆಲಸಮಾಡಿದಂತಿತ್ತು. ಜೊತೆಗೇ ನಾನೂ ಕೂಡ ಅಲ್ಲಲ್ಲಿ ಲೇಖನಕ್ಕೆ ಪೋತಿ ಕೂಡಿಸುತ್ತ, ತೇಪೆ ಹಾಕುತ್ತ ನನ್ನ ಲೇಖನಗಳ ಹನುಮದ್ವಿಕಾಸವನ್ನು ಅವರಿಗೆ ನಿಧಾನವಾಗಿ ಪರಿಚಯಿಸುತ್ತ ಅವರ ಸತ್ವ ಪರೀಕ್ಷೆಯನ್ನು ಅಷ್ಟೇ ಉತ್ಸಾಹದಿಂದ ಮಾಡಿದೆ.

ನನ್ನ ಎರಡನೆಯ ಸಂಕಲನ ಗತ–ಕಥನವೂ ಆನಂದ ಕಂದ ಪ್ರಕಾಶನದಿಂದಲೇ ಪ್ರಕಟವಾಯಿತು. ಪುಸ್ತಕಗಳನ್ನು ಪ್ರಕಟಿಸುವುದು ಪಾಟೀಲರಿಗೆ ನೀರು ಕುಡಿದಷ್ಟು ಸಲೀಸು ಎಂಬ ಅಭಿಪ್ರಾಯ ನನ್ನಲ್ಲಿ ಗಟ್ಟಿಯಾಗತೊಡಗಿತು. ಆ ಕಲ್ಪನೆಯಿಂದಲೇ ನನ್ನ ಮಗಳು ಸ್ವಯಂಪ್ರಭಾಳ ಕವನ ಸಂಕಲನವೊಂದನ್ನು ಹದಿನೈದು ದಿನದೊಳಗೇ ಪ್ರಿಂಟು ಮಾಡಿ ಹೊರತರುವ ಪ್ರಸಂಗ ಬಂದಾಗ ಧೃತಿಗೆಡದೇ ಪಾಟೀಲರನ್ನು ಸಂಪರ್ಕಿಸಿದ್ದೆ. ಅವರು ಎಲ್ಲಿದ್ದರೋ ತಿಳಿಯದು. ಊರಲ್ಲಿ ಇದ್ದಂತಿರಲಿಲ್ಲ. ಒಟ್ಟು ಫೋನಿಗಂತೂ ಸಿಗುತ್ತಿದ್ದರು ಅಂದಮೇಲೆ ಬಿಎಸ್ಸೆನ್ನೆಲ್ ತರಂಗಾಂತರ ಪ್ರದೇಶದಲ್ಲಿ ಭೂಮಿಯ ಮೇಲೆ ಎಲ್ಲೋ ಒಂದೆಡೆಯಲ್ಲಂತೂ ಇದ್ದಿರಲೇಬೇಕು. ಹಾಗೂ ಅದೇ ಬಲದಿಂದಲೇ ಬೆಂಗಳೂರಿನಲ್ಲಿ ಕವನಸಂಕಲನವೂ ಪ್ರಿಂಟಿಗೇರಿತು. ನನಗೆ ಅವರ ಕುರಿತು ಇದ್ದ ನಂಬಿಕೆ ಮತ್ತೂ ಗಟ್ಟಿಯಾಯಿತು. ಜೊತೆಗೇ ಪಾಟೀಲರು ಇದನ್ನೆಲ್ಲ ಉದ್ಯಮ ಎಂಬುದಾಗಿ ತಿಳಿದಿದ್ದಾರೆ ಎಂಬುದರ ಕುರಿತು ನನ್ನದೇ ಸಂದೇಹಗಳಿವೆ. ಕೆಲವೊಮ್ಮೆ ಸಂತೋಷಕ್ಕಾಗಿ, ಕೆಲವೊಮ್ಮೆ ಸಂಬಂಧಕ್ಕಾಗಿ ಮಾಡಿದ್ದೇ ಹೆಚ್ಚು. ತಮ್ಮ ಪ್ರಕಾಶನವು ಜಗದ್ವಿಖ್ಯಾತವಾಗಬೇಕೆಂಬ ಮೋಹವೂ ಅವರಿಗಿದ್ದಂತಿಲ್ಲ. ಅವರು ಲಾಭದ ಕುರಿತು ತಲೆಕೆಡಿಸಿಕೊಂಡಿದ್ದನ್ನು ನಾನು ನೋಡಿಲ್ಲ. ಈ ಪ್ರಿಂಟಾದ ಪುಸ್ತಕಗಳೆಲ್ಲ ಮಾರಾಟವಾಗಲೇಬೇಕೆಂಬ ಸಿದ್ಧಾಂತಕ್ಕೂ ಅವರು ಬದ್ಧರಾದಂತಿಲ್ಲ. ನಿಮಗೆ ಓದುವ ಯೋಗ್ಯತೆಯಿಲ್ಲದಿದ್ದರೆ ನಾನೇನು ಮಾಡಲಿ? ಎಂಬ ಧೋರಣೆ ಇದ್ದಂತಿದೆ. ಒಟ್ಟಿನಲ್ಲಿ ಈ ದೃಷ್ಟಿಯಿಂದ ನನಗೆ ಪಾಟೀಲರು ಬಿರುಬಿಸಿಲಿನ ರಸ್ತೆಯಂಚಿನಲ್ಲಿ ಬಂದವರಿಗೆ ನೆರಳಾಗುವ ಮರದಂತೆ ಕಾಣಿಸುತ್ತಾರೆ. ನಾನೂ ಸಾಕಷ್ಟು ಅದರ ಉಪಯೋಗವನ್ನು ಪಡೆದುಕೊಂಡೆ. ನಮ್ಮ ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರದ ಕೆಲವು ಕಾರ್ಯಕ್ರಮಗಳನ್ನು ಮಲ್ಲಾಡಿಹಳ್ಳಿಯ ಅವರ ಸಂಸ್ಥೆಯಲ್ಲಿ ನಡೆಸಲು ಅವರ ಸಹಕಾರವನ್ನು ಕೋರಿದೆ. ಹಾಗೂ ಕೇಳಿದಾಗಲೆಲ್ಲ ನಡೆಸಿಕೊಟ್ಟರು.

ಇದು ನನ್ನ ಪಾಟೀಲರ ಸಂಬಂಧದ ವ್ಯಾವಹಾರಿಕ ಸ್ತರ. ಅವರೇಕೆ ಈ ಪ್ರಕಟಣೆ, ಸಂವಾದ ಇವನ್ನೆಲ್ಲ ಹಚ್ಚಿಕೊಂಡಿದ್ದಾರೆ, ನನ್ನ ಜೊತೆಗೆ ಈ ರೀತಿಯಲ್ಲಿ ವ್ಯವಹರಿಸಿದ್ದಾರೆ ಎಂಬುದಕ್ಕೆ ಇನ್ನೂ ಆಳವಾದ ಕಾರಣಗಳಿವೆ ಎಂಬುದು ನನ್ನ ಅನುಭವ. ಒಂದು ಸಾಂಸ್ಕೃತಿಕ ಚರ್ಚೆ ನಡೆಯಬೇಕೆಂಬುದು ಅವರಲ್ಲಿ ಸ್ಥಾಯಿಭಾವವಾಗಿ ಕೆಲಸಮಾಡುತ್ತಿದೆ. ನಮ್ಮಿಬ್ಬರ ಮಧ್ಯೆ ಕಳೆದ ಸುಮಾರು ಹದಿನೈದು

ವರ್ಷಗಳವರೆಗೆ ನಡೆದಿರುವುದು ಪ್ರಕಾಶಕ–ಲೇಖಕ ಸಂಬಂಧವಲ್ಲ. ಅದು ಒಂದು ಸಾಂಸ್ಕೃತಿಕ ಚರ್ಚೆ. ಇದರಲ್ಲಿ ಇಬ್ಬರೂ ಬೆಳೆದುದನ್ನು ಕಂಡು ವಿಸ್ಮಿತರಾಗಿದ್ದೇವೆ. ಕೆಲವೊಮ್ಮೆ ನಾನು ಅವರಿಗೆ ಕುತೂಹಲಕಾರಿಯಾಗಿ ಕಂಡಿದ್ದೇನೆ, ಕೆಲವೊಮ್ಮೆ ಅವರು ನನಗೆ ಕುತೂಹಲಕಾರಿಯಾಗಿ ಕಂಡಿದ್ದಾರೆ. ಈಗಿನ ಕಾಲದಲ್ಲಿ ಬ್ರಾಹ್ಮಣ ಜಾತಿಯ ಲೇಖಕರು ಭಾರತೀಯ ಪರಂಪರೆಯ ಕುರಿತು ಒಟ್ಟಾರೆಯಾಗಿ (ಸಂಸ್ಕೃತವನ್ನೂ ಒಳಗೊಂಡಂತೆ) ಸಕಾರಾತ್ಮಕವಾಗಿ ಮಾತನಾಡಿದರೆ ಜನರಿಗೆ ಅವರು ಅರ್ಥವಾಗುವುದು ಕಷ್ಟ, ಅಪಾರ್ಥವಾಗುವುದೇ ಸಾಮಾನ್ಯ. ಅವರ ಕುರಿತು ಹುನ್ನಾರದ ಕಥೆಗಳು ಬೆಳೆದುಕೊಳ್ಳುತ್ತವೆ. ಇಂಥದೊಂದು ಭಯಭೀತ ಬಂಡಾಯದ ವಾತಾವರಣದಲ್ಲಿ ರಾಘವೇಂದ್ರ ಪಾಟೀಲರು ಸಾಕಷ್ಟು ಟೀಕೆಗಳನ್ನು, ಖಂಡನೆಗಳನ್ನು ಆಹ್ವಾನಿಸುತ್ತಲೇ ನಿಸ್ಸಂಕೋಚವಾಗಿ ತಮ್ಮ ವಿಚಾರಗಳನ್ನು ಮಂಡಿಸಿದ್ದನ್ನು ನೋಡಿದ್ದೇನೆ.

ನಾನು ಒಮ್ಮೆ ಪಾಟೀಲರ ಜೊತೆಗೆ ನಡೆಸಿದ ವಾಗ್ವಾದವೊಂದು ಬಹಳ ಮಹತ್ವದ್ದೆಂದು ನನಗನಿಸುತ್ತದೆ. ಪಾಟೀಲರಿಗೂ ಹಾಗೇ ಅನಿಸಿದೆ, ಹಾಗೂ ಅವರು ಒಂದೆರಡು ಬಾರಿ ತಮ್ಮ ಭಾಷಣದಲ್ಲಿ ಅದನ್ನು ವಿಶೇಷವಾಗಿ ಪ್ರಸ್ತಾಪಿಸಿದ್ದೇ ಅದಕ್ಕೆ ಸಾಕ್ಷಿ. ೯೦ರ ದಶಕದಲ್ಲಿ ನಾನು ಸೆಕ್ಯುಲರ್ ಸಿದ್ಧಾಂತದಿಂದ ಪ್ರಭಾವಿತನಾಗಿದ್ದೆ. ಆಗ ಸಂವಾದ ಪತ್ರಿಕೆಯಲ್ಲಿ ಶಿವರಾಮ ಕಾರಂತರ ಕುರಿತು ಪಾಟೀಲರು ಬರೆದಿದ್ದ ಒಂದು ಟಿಪ್ಪಣಿಗೆ ಖಾರವಾಗಿ ಪ್ರತಿಕ್ರಿಯಿಸಿದ್ದೆ. ಶಿವರಾಮ ಕಾರಂತರು ರಾಮಮಂದಿರ ನಿರ್ಮಾಣಕ್ಕೆ ದೇಣಿಗೆ ಕೊಟ್ಟು ಪಾಕಿಸ್ತಾನದಲ್ಲಿ ಹಿಂದೂ ಮಂದಿರಗಳನ್ನು ಮುಸ್ಲಿಮರು ಕೆಡವಿದ ವಿಷಯವನ್ನು ಪ್ರಸ್ತಾಪಿಸಿದ್ದರು. ಹಾಗೂ ಆ ಸಂದರ್ಭದಲ್ಲಿ ಸೆಕ್ಯುಲರ್ ವಾದಿಗಳದು ಮುಸ್ಲಿಂ ಪರ ನೀತಿ ಹಾಗೂ ಅವರು ಸುಳ್ಳು ಸೆಕ್ಯುಲರ್ ವಾದಿಗಳು ಎಂಬ ಹೇಳಿಕೆಯನ್ನೂ ಮಾಡಿದ್ದರೆಂದು ಕಾಣುತ್ತದೆ. ಅದನ್ನು ಉಲ್ಲೇಖಿಸುತ್ತ ಪಾಟೀಲರು ಕಾರಂತರ ಈ ನಿಲುವಿನಲ್ಲಿ 'ಬುದ್ಧಿಜೀವಿಗಳ ಹಿಪಾಕ್ರಸಿಯ ಕುರಿತು ಅವರು ಸಿನಿಕರಾಗಿ ಹೀಗೆ ಹೇಳಿದ್ದಾರೆ'ಯೇ ವಿನಃ ಅವರು ಹಿಂದೂವಾದವನ್ನು ಸಮರ್ಥಿಸುತ್ತಿಲ್ಲ ಎಂಬುದಾಗಿ ಬರೆದಿದ್ದರು. ನಾನು ಕಾರಂತರು ವಾಸ್ತವವನ್ನು ಸರಳೀಕರಿಸುತ್ತಿರುವುದರಿಂದಲೇ ಹಿಂದೂ ವಾದದ ಸಮರ್ಥನೆಗೆ ಇಳಿದಿದ್ದಾರೆ ಎಂಬುದಾಗಿ ವಾದಿಸಿದ್ದೆ. ಇಂದೂ ಕೂಡ ನನ್ನ ಆ ವಾದದಲ್ಲಿ ನನಗೆ ತಪ್ಪೇನೂ ಕಾಣಿಸುವುದಿಲ್ಲ. ಆದರೆ ನನಗೆ ಅದಕ್ಕಿಂತಲೂ ಆಸಕ್ತಿಪೂರ್ಣವಾದ ವಿಷಯವೆಂದರೆ ಈ ಮುಂದಿನದು: ಇಂದಿನ ಬುದ್ಧಿಜೀವಿಗಳ ಇಬ್ಬಂದಿ ನೀತಿಯನ್ನು ಉಲ್ಲೇಖಿಸುತ್ತ ಪಾಟೀಲರು ಹೀಗೆ ಹೇಳಿದ್ದರು, "ಒಂದು ಇತಿಹಾಸದ ಕಾಲಖಂಡದಲ್ಲಿ ನಡೆದಿದೆ ಎನ್ನಲಾದ ತಪ್ಪುಗಳನ್ನು ವರ್ತಮಾನದ ಜನಾಂಗದೊಂದಿಗೆ ತಳುಕುಹಾಕಿ ನೋಡಲಾಗುತ್ತಿದ್ದರೆ ಇನ್ನೊಂದು ಕಾಲಖಂಡದಲ್ಲಿನ ಐತಿಹಾಸಿಕ ಸತ್ಯಗಳನ್ನು ವರ್ತಮಾನದ ಸಾಂದರ್ಭಿಕತೆಗಾಗಿ ಪಲ್ಲಟಗೊಳಿಸುವ ಇಲ್ಲವೇ ಚರ್ಚಿಸದಿರುವ ನಿಲುವು ತಳೆಯಲಾಗುತ್ತಿದೆ." ಇಂದು ನನಗೆ ಪಾಟೀಲರು ಇಲ್ಲಿ ಆಸಕ್ತಿಪೂರ್ಣವಾದ ಒಂದು ವಿಚಾರವನ್ನು ಪ್ರಸ್ತಾಪಿಸುವುದು ಗಮನಕ್ಕೆ ಬರುತ್ತಿದೆ. ನನ್ನನ್ನೂ ಒಳಗೊಂಡು, ಅಂದು ಸೆಕ್ಯುಲರ್ ವಾದಿಗಳು ಎಂದುಕೊಂಡವರಲ್ಲಿದ್ದ ಒಂದು ಇಬ್ಬಂದಿ ನೀತಿಯನ್ನು ಅವರು ನನ್ನ ಗಮನಕ್ಕೆ ತರುತ್ತಿದ್ದರು. ಇತಿಹಾಸದ ಒಂದೇ ರೀತಿಯ ಎರಡು ಘಟನೆಗಳಲ್ಲಿ ಒಂದನ್ನು ಖಂಡಿಸಿದರೆ ಮತ್ತೊಂದನ್ನು ತೇಲಿಸಿಬಿಡುವ ಈ ನಿಲುವು ನಮ್ಮಂಥ ಸೆಕ್ಯುಲರ್ ವಾದಿಗಳ ಅಪ್ರಾಮಾಣಿಕತೆಗೆ ಕನ್ನಡಿ ಹಿಡಿದಂತೆ ಕಾಣಿಸುವುದಂತೂ ನಿಜ. ಆದರೆ ಇದನ್ನು ಹಿಪಾಕ್ರಸಿ ಎಂಬುದಾಗಿ ಅರ್ಥೈಸುವುದು ಸಮಂಜಸವಲ್ಲ. ಇದು ಅಪ್ರಾಮಾಣಿಕತೆಗಿಂತಲೂ ಅಜ್ಞಾನದಿಂದ ಹುಟ್ಟಿದ ಸಮಸ್ಯೆ ಎಂಬುದು ನನ್ನ ಅಭಿಪ್ರಾಯ; ನಾವು ಕಟಕಟೆಗೆ ಕರೆಯುವ ಐತಿಹಾಸಿಕ ಸಾಕ್ಷಿಗಳು ಸೃಷ್ಟಿಯಾದದ್ದೇ ಪಾಶ್ಚಾತ್ಯ ಗ್ರಹಿಕೆಯ ಚೌಕಟ್ಟುಗಳಿಂದ ಹಾಗೂ ನಾರ್ಮೇಟಿವ್ ಎಥಿಕ್ಸ್‌ನಿಂದ ಎಂಬ ಸತ್ಯದ ಕುರಿತ ಅಜ್ಞಾನ ಹಾಗೂ ಪಾಶ್ಚಾತ್ಯ ಸಂಸ್ಕೃತಿ ಹಾಗೂ ಭಾರತೀಯ ಸಂಸ್ಕೃತಿಗಳ ಕುರಿತ ಅಜ್ಞಾನ. ಈ ಅಜ್ಞಾನವು ಹಿಂದುತ್ವವಾದ ಹಾಗೂ ಸೆಕ್ಯುಲರ್‌ವಾದಗಳೆರಡರಲ್ಲೂ ಸಮನಾಗಿ ಹಂಚಿಕೆಯಾಗಿದೆ.

ಈ ಚರ್ಚೆ ನಡೆಯುವ ಕಾಲಕ್ಕೆ ನಾನು ವಸಾಹತೋತ್ತರ ವಾದದಿಂದ ಪ್ರಭಾವಿತನಾಗಿದ್ದೆ. ಹಾಗಾಗಿ ಮೊದಲಿನ ಭಾಗಕ್ಕೆ ಸಂಬಂಧಿಸಿದಂತೆ ನಾನು ವಾದಿಸಿದ್ದೆಂದರೆ 'ವರ್ತಮಾನದ ಒಂದು ಜನಾಂಗವು ಒಂದು ಕಾಲಖಂಡವನ್ನು ತನ್ನ ಗುರುತಿಗಾಗಿ ಬಳಸಿಕೊಂಡಿರುವುದರಿಂದ ಈ ಕಾಲದ ಚಳುವಳಿಗಳು  ಅದಕ್ಕೆ ಪ್ರತಿಕ್ರಿಯೆಗಳೇ ಹೊರತೂ ಯಾವುದೋ ಪ್ರಾಚೀನ ಕಾಲಖಂಡದ ಕುರಿತಾಗಿ ಅಲ್ಲ. ಅದು ಒಂದು ರೀತಿಯಲ್ಲಿ ಹಿಂದೂ ರಾಷ್ಟ್ರ ಕಲ್ಪನೆಗೆ ಪ್ರತಿಕ್ರಿಯೆ ಕೂಡಾ. ಆದರೆ ಹಿಂದೂ ರಾಷ್ಟ್ರವಾದಿಗಳು ಮಧ್ಯಕಾಲೀನ ಇತಿಹಾಸದ ತಪ್ಪು ಅಂಶಗಳಿಗೆ ಒತ್ತು ಕೊಡುತ್ತಾರೆ ಹಾಗೂ ಅದನ್ನು ತಪ್ಪಾಗಿ ನಿರೂಪಿಸುತ್ತಾರೆ, ಹಾಗಾಗಿ ಅವೆರಡೂ ಒಂದೇ ಅಲ್ಲ'. ನಾನು ಈ ಸಂದರ್ಭದಲ್ಲಿ ಮನುಸ್ಮೃತಿ, ವರ್ಣಾಶ್ರಮ ಧರ್ಮ, ಅಸ್ಪೃಶ್ಯತೆ, ಇತ್ಯಾದಿಗಳನ್ನು ವರ್ತಮಾನದ ವಾಸ್ತವಗಳಾಗಿರುವುದರಿಂದಲೇ ಅವುಗಳ ವಿರುದ್ಧ ಚಳುವಳಿಗಳು ಹುಟ್ಟಿವೆ ಎಂಬುದಾಗಿ ವಾದಿಸಿದ್ದೆ. ಭಾರತೀಯ ಸಂಸ್ಕೃತಿಯ ಕುರಿತ ಪಾಶ್ಚಾತ್ಯ ಜ್ಞಾನವನ್ನು ಸಮಸ್ಯೀಕರಿಸಿದ ನಂತರ ಏಳಬಹುದಾದ ಸವಾಲುಗಳನ್ನು ಎದುರಿಸಲು ವಸಾಹತೋತ್ತರವಾದಿಗಳು ಮಾಡಿಕೊಂಡ ಸಮಜಾಯಿಷಿಗಳನ್ನಾಧರಿಸಿ ನನ್ನ ಉತ್ತರವನ್ನು  ರೂಪಿಸಿದ್ದೆನೇ ವಿನಃ ನನಗೇ ಅವು ಮನವರಿಕೆಯಾಗಿರಲಿಲ್ಲ. ನನ್ನ ಉತ್ತರಕ್ಕೆ ಪ್ರತಿಕ್ರಿಯಿಸುತ್ತ ಪಾಟೀಲರು ಇಂಥ ಚಳುವಳಿಗಳು ಹುಟ್ಟಿಸುತ್ತಿರುವ ಜನಾಂಗ ದ್ವೇಷದ ಕುರಿತು ಪ್ರಸ್ತಾಪಿಸಿ ಮನುಸ್ಮೃತಿಯೆಂಬ ಸತ್ತ ಕುದುರೆಯನ್ನು ಬಡಿಯುವುದರಲ್ಲಿ ಅರ್ಥವಿಲ್ಲ ಎಂದು ಪ್ರಗತಿಪರರನ್ನು ವಿಮರ್ಶಿಸಿದ್ದರು.

ಈ ಮೇಲಿನ ಪ್ರತಿಕ್ರಿಯೆಯನ್ನು ಬರೆದು ನಾನು 'ಈ ಲೇಖನವನ್ನು ಓದಿ ನಿಮ್ಮ ಅಭಿಪ್ರಾಯವನ್ನು ಬದಲಿಸಿಕೊಂಡಿರಾದರೆ ಈ ಲೇಖನವು ಸಾರ್ಥಕವಾಯಿತೆಂದುಕೊಳ್ಳುತ್ತೇನೆ' ಎಂಬುದಾಗಿ ಪಾಟೀಲರಿಗೆ ಬರೆದಿದ್ದೆ. ಇಂದು ಈ ಪ್ರತಿಕ್ರಿಯೆ ಹಾಗೂ ಚರ್ಚೆಯನ್ನು ಓದಿದಾಗ ನನ್ನ ಭಂಡತನವೋ, ಬೋಳೆತನವೋ ಅದರಲ್ಲಿ ಕಂಡುಬಂದು ನನಗೇ ನಗು ಬರುತ್ತದೆ. ಏಕೆಂದರೆ, ಇಂದು ಸೆಕ್ಯುಲರಿಸಂ, ಜಾತಿಶೋಷಣೆ ಇತ್ಯಾದಿಗಳ ಕುರಿತ ನನ್ನ ಅಭಿಪ್ರಾಯಗಳು ಸರಿಯಾಗಿ ೧೮೦ ಡಿಗ್ರಿ ಕೋನಕ್ಕೆ ತಿರುಗಿವೆ. ನನ್ನ ಮತ್ತು ಪಾಟೀಲರ ಇಬ್ಬರ ವಾದಗಳಲ್ಲೂ ನಾವು ಭಾರತೀಯ ಸಮಾಜದಲ್ಲಿ ಯಾವ ವಾಸ್ತವವನ್ನು ಭಾವಿಸಿಕೊಂಡು ಚರ್ಚಿಸಿದ್ದೆವೊ ಆ ಜಾತಿ ವ್ಯವಸ್ಥೆಯೇ ಪಾಶ್ಚಾತ್ಯರ ಸೃಷ್ಟಿ ಎಂಬುದು ನನಗೆ ಬಾಲಗಂಗಾಧರರನ್ನು ಓದಿದ ನಂತರ ಮನದಟ್ಟಾಗಿದೆ. ಹಾಗೂ ಸಂಶೋಧನೆಗಳ ಮೂಲಕವೂ ಅದನ್ನು ಧೃಡೀಕರಿಸಿಕೊಂಡಿದ್ದೇವೆ.

ಈಗ ಅಂದು ಪಾಟೀಲರು ಹೇಳಿದ ಒಂದು ಮಾತು ಮುಖ್ಯವೆನ್ನಿಸುತ್ತದೆ. ಅದೆಂದರೆ, ನಮ್ಮ ಸಮಾಜದ ಸುಧಾರಣೆಯ ಧ್ಯೇಯವನ್ನಿಟ್ಟುಕೊಂಡು, ನಮ್ಮೆಲ್ಲ ಮಾನವೀಯ ಕಳಕಳಿಯಿಂದಲೇ ಆಧುನಿಕ ವಾದಗಳನ್ನೂ ಹೋರಾಟಗಳನ್ನೂ ಬೆಳೆಸಿಕೊಂಡು ಬಂದಿದ್ದೇವೆ. ಆದರೆ ಒಂದು ಸಮುದಾಯದ ನ್ಯಾಯದ ಕುರಿತಾದ ನಮ್ಮ ಮಾತುಗಳು ಇನ್ನೊಂದು ಸಮುದಾಯದ ಕುರಿತು ದ್ವೇಷವನ್ನು ಪ್ರಚೋದಿಸುವ ಕೆಲಸವನ್ನೂ ಜೊತೆಜೊತೆಗೇ ಮಾಡುವುದು ಅನಿವಾರ್ಯವೋ ಎಂಬಂತಾಗಿಬಿಟ್ಟಿದೆ.  ಇಂಥ ಮಾತುಗಳು ಗುರಿಯಿಟ್ಟ ಸಮುದಾಯಗಳ ಕುರಿತು ಕೇವಲ ದ್ವೇಷವೊಂದೇ ಅಲ್ಲ ಅಪನಂಬಿಕೆಯನ್ನೂ ಪ್ರಚೋದಿಸುತ್ತವೆ. ಅನ್ಯಾಯವಾಗಿದೆ ಎಂಬುದಾಗಿ ವರ್ಣಿಸಿಕೊಂಡ ಸಮುದಾಯಗಳು ಅಂಥ ಅನ್ಯಾಯವನ್ನು ಮಾಡಿದ ಒಂದು ಸಮುದಾಯವನ್ನು ಗುರಿಯಾಗಿಟ್ಟುಕೊಂಡು ಅದರಿಂದಾಗಿಯೇ ಈ ಅನ್ಯಾಯವಾಗುತ್ತಿದೆ ಎಂಬುದಾಗಿ ಭಾವಿಸಿಕೊಂಡು, ಅದರಿಂದ ತಮ್ಮ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳುವ ಹವಣಿಕೆಯಲ್ಲಿರುತ್ತವೆ. ಅನ್ಯಾಯಕ್ಕೆ ತುತ್ತಾಗಿವೆ ಎಂಬ ಸಮುದಾಯಕ್ಕೆ ಸಾರಾಸಗಟಾಗಿ ಎಲ್ಲಾ ಸದ್ಗುಣಗಳನ್ನೂ, ಮುಗ್ಧತೆಯನ್ನೂ ಆರೋಪಿಸಿ ಅನ್ಯಾಯವನ್ನು ಮಾಡಿವೆ ಎಂಬುದಾಗಿ ಭಾವಿಸಿಕೊಂಡ ವೈರಿ ಸಮುದಾಯಗಳಿಗೆ ಸಾರಾಸಗಟಾಗಿ ಕಲ್ಪಿತ ದುರ್ಗುಣಗಳನ್ನು ಹಾಗೂ ಕುತಂತ್ರಗಳನ್ನು ಆರೋಪಿಸಿ, ಆ ಸಮುದಾಯವನ್ನು ಸಂದೇಹದಿಂದಲೇ ನೋಡುವ ಪ್ರವೃತ್ತಿ ಬೆಳೆಯುತ್ತದೆ. ಈ ದೃಷ್ಟಿಯು ಒಂದು ಸಮುದಾಯಕ್ಕೆ

ವ್ಯಕ್ತಿಗುಣಗಳನ್ನು ಆರೋಪಿಸುವುದರಿಂದ ಅದು ಕಲ್ಪಿತ ಸಮುದಾಯ ಮಾತ್ರವಾಗಬಲ್ಲದು. ಈ ದೃಷ್ಟಿಯನ್ನು ಪ್ರಮಾಣೀಕರಿಸುವ ಸಲುವಾಗಿ ಕೆಲವು ಆಯ್ದ ಉದಾಹರಣೆಗಳನ್ನಷ್ಟೇ ಹೇಳಲಾಗುತ್ತಿರುತ್ತದೆ. ಅದನ್ನು ಪ್ರಶ್ನಿಸಬಲ್ಲ ವ್ಯತಿರಿಕ್ತ ಉದಾಹರಣೆಗಳನ್ನು ಅಪವಾದವೆಂಬಂತೆ ನೋಡಲಾಗುತ್ತದೆ. ಇಲ್ಲ ಯಾವುದೋ ಬೇಕಾಬಿಟ್ಟಿ ವಿವರಣೆಗಳನ್ನು ನೀಡಿ ಅವುಗಳಿಗೆ ಉತ್ತರವನ್ನು ನೀಡಲಾಗುತ್ತದೆ. ಹಾಗಾಗಿಯೇ ತಮ್ಮ ವೈರಿ ಸಮುದಾಯಗಳಿಂದ ಇಂಥ ಅನ್ಯಾಯಗಳ ವಿರುದ್ಧದ ಹೋರಾಟಗಳನ್ನು ಬೆಂಬಲಿಸುವ ವೈರಿ ಸಮುದಾಯದ ಕೆಲವರನ್ನು ತಾತ್ಪೂರ್ತಿಕವಾಗಿ ನಂಬಲಾಗುತ್ತದೆ ಅಥವಾ ಅಪವಾದವೋ ಎಂಬಂತೆ ನೋಡಲಾಗುತ್ತದೆ. ಅಥವಾ ಅವರ ಬೆಂಬಲವನ್ನು ಒಂದು ತಂತ್ರವಾಗಿ ಸ್ವೀಕರಿಸಲಾಗುತ್ತದೆ. ಈ ಕಾರಣದಿಂದಾಗಿ ನಮ್ಮ ಸಾರ್ವಜನಿಕ ಜೀವನವೆಂದರೆ ಹಿಂದೂ, ಮುಸ್ಲಿಂ, ಬ್ರಾಹ್ಮಣ, ಶೂದ್ರ, ದಲಿತ, ಆರ್ಯ, ದ್ರಾವಿಡ, ಕನ್ನಡಿಗ, ತಮಿಳಿಗ, ಇತ್ಯಾದಿ ವಿಭಿನ್ನ ಕಲ್ಪಿತ ಸಮುದಾಯಗಳ ಹಕ್ಕುಗಳನ್ನು ಸ್ಥಾಪಿಸುವ ಅಥವಾ ಒಂದು ಸಮುದಾಯವು ಮತ್ತೊಂದರ ಹಕ್ಕುಗಳನ್ನು ಕಸಿದುಕೊಳ್ಳುತ್ತಿರುವ ರಣರಂಗವೆಂಬಂತೆ ಭಾವಿಸಲಾಗಿದೆ. ಇಂದು ನಡೆಯುತ್ತಿರುವ ಯಾವುದೇ ಅನ್ಯಾಯದ ವಿರುದ್ಧದ ಹೋರಾಟದಲ್ಲೂ ಕೂಡ ಈ ಮೇಲಿನ ಸಾಮಾನ್ಯ ಲಕ್ಷಣವನ್ನು ಕಾಣಬಹುದು. ಅಂದರೆ ನ್ಯಾಯದ ಬೇಡಿಕೆಯು ಅಥವಾ ಸದ್ಗತಿಯ ಕಲ್ಪನೆಯು  ವೈರತ್ವದ ಭಾಷೆಯಿಂದ ಪ್ರಮಾಣಿತವಾಗುವ ಅನಿವಾರ್ಯತೆ ಬೆಳೆದಿದೆ. ವೈರಿಯನ್ನು ಗುರುತಿಸದೇ ಹೋರಾಟಕ್ಕೆ ತಳಹದಿ ಹಾಗೂ ಸಮರ್ಥನೆ ಒದಗಲಾರದು.

ಈ ಗುಣವು  ಸಾಮಾಜಿಕ ಹೋರಾಟಗಳ ಒಂದು ಭಾಗವಾಗಿ ನಮಗೆ ಪಾಶ್ಚಾತ್ಯರಿಂದಲೇ ಬಂದಿದೆ. ರಿಲಿಜನ್ನು, ರಾಷ್ಟ್ರ, ವರ್ಗ, ಲಿಂಗಾಧಾರಿತ ಪ್ರಭೇದಗಳು ಎಲ್ಲವೂ ಈ ರೀತಿಯಲ್ಲಿ ಸಾಮುದಾಯಿಕ ವೈರಿಗಳನ್ನು ಕಲ್ಪಿಸಿ ನ್ಯಾಯ ಸಾಧನೆಗೆ ಹೊರಡುತ್ತವೆ. ಹಾಗಾಗಿ ನ್ಯಾಯದ ಸಾಧನೆಗೂ ಕಲ್ಪಿತ ವೈರಿಗಳನ್ನು ಗುರುತಿಸಿಕೊಳ್ಳುವುದಕ್ಕೂ ಅವಿನಾಭಾವೀ ಸಂಬಂಧ ಬೆಳೆದಿದೆ. ಈ ಕಲ್ಪಿತ ವೈರಿ ಸಮುದಾಯದ ಕುರಿತ ನಿರ್ಣಯಗಳನ್ನು ಪ್ರಶ್ನಿಸಿದರೆ ಅದು ಸ್ವಾಭಾವಿಕವಾಗಿಯೇ  ನ್ಯಾಯವಿರೋಧಿಯಾಗಿ ಕಾಣಿಸುತ್ತದೆ.  ಅದೊಂದೇ ಅಲ್ಲ, ಇಂಥ ಸಮುದಾಯಗಳನ್ನು ಸಮಾಜವಿಜ್ಞಾನಗಳ ಮೂಲಕ ಸೃಷ್ಟಿಸಿ ನೀಡಿದ ಪಾಶ್ಚಾತ್ಯ ಜ್ಞಾನದ ಕುರಿತು ಪ್ರಶ್ನೆಗಳನ್ನು ಎತ್ತುವುದೆಂದರೆ ಈ ಹೋರಾಟಗಳ ಬೇರನ್ನೇ ಕತ್ತರಿಸಿದ ಹಾಗೆ ಅಂದುಕೊಳ್ಳಲಾಗಿದೆ. ಒಂದು ಅನ್ಯಾಯವನ್ನು ಗುರುತಿಸಬೇಕಾದರೆ ಹಾಗೂ ಪರಿಹರಿಸಬೇಕಾದರೆ ಈ ದ್ವೇಷದ ಚೌಕಟ್ಟು ಹಾಗೂ ದ್ವೇಷದ ಭಾಷೆಯಲ್ಲದೇ ಅನ್ಯ ಮಾರ್ಗಗಳಿಲ್ಲವೆ?  ಒಂದು ಅವಾಸ್ತವಿಕವಾದ ವೈರಿ ಸಮುದಾಯವನ್ನು ಗುರುತಿಸಿಕೊಳ್ಳದಿದ್ದರೆ ಅನ್ಯಾಯದ ವಿರುದ್ಧ ಹೋರಾಟ ಸಾಧ್ಯವಿಲ್ಲವೆ? ಈ ದ್ವೇಷದ ಪರಿಭಾಷೆ ಎಲ್ಲಿಂದ ಹುಟ್ಟುತ್ತದೆ? ಎಂಬೆಲ್ಲ ಪ್ರಶ್ನೆಗಳನ್ನು ಕೇಳಿಕೊಳ್ಳಲಿಕ್ಕೆ ಇದು ಸೂಕ್ತವಾದ ಕಾಲ. ಈಗಾಗಲೇ ಈ ಪರಿಭಾಷೆಯಿಂದ ಸಾಕಷ್ಟು ಒಡಕುಗಳು ಅಪನಂಬಿಕೆಗಳು ಸೃಷ್ಟಿಯಾಗಿವೆ.  ಮಾನವೀಯ ಕಾಳಜಿಯ ಹೆಸರಿನಲ್ಲೇ ಮತ್ತೊಬ್ಬ ಮನುಷ್ಯನ ಕುರಿತು ಸಾಕಷ್ಟು ಅಮಾನುಷರಾಗಿ ಯೋಚಿಸುವುದನ್ನು, ಆಚರಿಸುವುದನ್ನು ಜನರು ಈಗಾಗಲೇ ಕಲಿತಿದ್ದಾರೆ ಎಂಬುದು ಅವರ ಬರೆಹಗಳ ಮೂಲಕ ಹಾಗೂ ಭಾಷಣಗಳ ಮೂಲಕ ನಮ್ಮ ಅನುಭವಕ್ಕೆ ಬರುತ್ತಿದೆ.

ಹಾಗಾಗಿ ಇಂದು ಆ ಚರ್ಚೆಯನ್ನು ಮತ್ತೆ ಓದಿದಾಗ ಅಂದು ಪಾಟೀಲರೇ ತಮ್ಮ ಒಳನೋಟಗಳನ್ನು ಉಪಯೋಗಿಸಿ ಪ್ರಜ್ಞಾವಂತರಂತೆ ವಾದಿಸಿದ್ದರು ಹಾಗೂ ಒಂದು ಸಾಮಾಜಿಕ ಸಮಸ್ಯೆಯತ್ತ ನನ್ನ ಗಮನವನ್ನು ಸೆಳೆಯುತ್ತಿದ್ದರು ಎಂಬುದು ಅರಿವಾಗುತ್ತದೆ. ಆದರೆ ಅವರಲ್ಲೂ ನಮ್ಮ ಸಮಾಜ ಮತ್ತು ಸಂಸ್ಕೃತಿಯ ಕುರಿತು ನನ್ನಷ್ಟೇ ಗೊಂದಲಗಳು ಇದ್ದವೆನ್ನುವುದೂ ಸ್ಪಷ್ಟ. ನಾನೂ ಕೂಡ ಕಟ್ಟರ್ ಸೆಕ್ಯುಲರ್ ವಾದಿಯಾಗಿ ಪ್ರಗತಿಪರರ ಪರವಾಗಿ ವಾದಿಸಿದ್ದೆನಾದರೂ ನಮ್ಮ ಮುಂದಿರುವ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಹಿಡಿಯಲು ಪರದಾಡುತ್ತಿದ್ದೆ. ಬಹುಶಃ ಪಾಟೀಲರಂಥ ಮಿತ್ರರ ಇಂಥ ಹಲವಾರು ಪ್ರತಿಕ್ರಿಯೆಗಳು ನನ್ನ ಮನಸ್ಸಿನೊಳಗೆ ಕೂತು ಪ್ರಶ್ನೆಗಳಾಗಿ

ಬೆಳೆದಿದ್ದವೆಂದು ಕಾಣುತ್ತದೆ. ಮುಂದೆ ಹಲವಾರು ವರ್ಷಗಳ ವರೆಗೆ ಪ್ರಗತಿಪರರ, ಸೆಕ್ಯುಲರಿಸ್ಟರ ವಾದಗಳಲ್ಲಿ ಹಾಗೂ ಆಚರಣೆಗಳಲ್ಲಿ ಇರಬಹುದಾದ ಹಲವು ಮಿತಿಗಳು, ಸಮಸ್ಯೆಗಳು ನನಗೇ ಅರಿವಿಗೆ ಬರತೊಡಗಿದವು. ಸಮಸ್ಯೆಯೇನೆಂಬುದು ಸ್ಪಷ್ಟವಾದದ್ದು ಬಾಲಗಂಗಾಧರರ ಸಂಶೋಧನೆಯನ್ನು ಪರಿಚಯಿಸಿಕೊಂಡ ನಂತರವೇ. ಪಾಶ್ಚಾತ್ಯ ದೃಷ್ಟಿಕೋನದ ಸ್ವರೂಪ ಹಾಗೂ ಮಿತಿಗಳು ಏನು ಮತ್ತು ನಮ್ಮ ಸಮಾಜ ವಿಜ್ಞಾನವು ಹೇಗೆ ಪಶ್ಚಿಮದವರ ಅನುಭವವಾಗಿದೆ, ಹಿಂದುತ್ವವೆನ್ನುವುದು ಸೆಕ್ಯುಲರಿಸಂನದೇ ಸೃಷ್ಟಿ, ಇತ್ಯಾದಿಗಳೆಲ್ಲ ಗೊತ್ತಾದವು. ಸೆಕ್ಯುಲರ್ ಹಾಗೂ ಹಿಂದುತ್ವಗಳ ಚೌಕಟ್ಟನ್ನು ಬಿಟ್ಟು ಅದರಾಚೆಗೆ ಭಾರತೀಯ ಸಂಸ್ಕೃತಿಯ ಕುರಿತು ಅನ್ಯ ದೃಷ್ಟಿಕೋನದಿಂದ ಮುಕ್ತರಾಗಿ ನಮ್ಮದೇ ಸಮಾಜ ವಿಜ್ಞಾನವನ್ನು ಕಟ್ಟುವ ಮಾರ್ಗವೂ ಬಾಲಗಂಗಾಧರರ ಸಂಪರ್ಕದ ನಂತರ ಕಾಣತೊಡಗಿತು.

ಈ ಮಧ್ಯದಲ್ಲಿ ಆಗಾಗ ಪಾಟೀಲರನ್ನು ಭೇಟಿಮಾಡಿದಾಗ ನನ್ನ ಹೊಸ ವಿಚಾರಗಳನ್ನು ಹಂಚಿಕೊಂಡಿದ್ದೆ. ಲೌಕಿಕ ಅಲೌಕಿಕ ಗ್ರಂಥವು ಬಿಡುಗಡೆಯಾದ ನಂತರ ಅವರು ನನ್ನನ್ನೊಮ್ಮೆ ತಮ್ಮ ಕಾಲೇಜಿನಲ್ಲಿ ಇತಿಹಾಸದ ಕುರಿತು ಉಪನ್ಯಾಸವನ್ನು ನೀಡಲು ಕರೆಸಿದ್ದರು. ಇಂದು ನನಗೆ ನನ್ನ ಅಂದಿನ ನಿಲುವಿನ ಬಗೆಗಾಗಲೀ, ಇಂದಿನ ಈ ಬದಲಾವಣೆಯ ಕುರಿತಾಗಲೀ ವಿಷಾದವಿಲ್ಲ. ಬದಲಾಗಿ ಸಮಾಧಾನವೇ ಇದೆ. ನನ್ನನ್ನು ಹಿಂದೆ ಬಹುವಾಗಿ ಮೆಚ್ಚಿಕೊಂಡಿದ್ದವರಲ್ಲಿ ಅನೇಕರು ನನ್ನನ್ನು ಸಂತಾಪದಿಂದಲೋ, ಅನುಕಂಪೆಯಿಂದಲೋ, ಆಶ್ಚರ್ಯದಿಂದಲೋ  ನೋಡುತ್ತಿದ್ದಾರೆ. ಅವರ ಕಾಳಜಿ, ಆಕ್ಷೇಪಣೆಗಳು ನನಗೆ ಅರ್ಥವಾಗುತ್ತದೆ. ನನ್ನದು ಅವರಿಗೆ ಅರ್ಥವಾದಂತೆ ಕಾಣುತ್ತಿಲ್ಲ. ಇಂಥ ಸಂದರ್ಭದಲ್ಲಿ ಜೊತೆಜೊತೆಯಾಗಿ ವಿಚಾರಗಳನ್ನು ಹಂಚಿಕೊಂಡು ಬೆಳೆಯುತ್ತಿರುವವರು ಮಾತ್ರವೇ ಪರಸ್ಪರರ ತಾಕಲಾಟವನ್ನು ಅರ್ಥಮಾಡಿಕೊಳ್ಳಬಲ್ಲರು. ಈ ಅರ್ಥದಲ್ಲಿ ಇಂದು ನಾನು ಬಿರುಬಿಸಿಲಿನ ರಸ್ತೆಯಲ್ಲಿ ನಡೆಯುತ್ತಿರುವ ಪಥಿಕನಾಗಿದ್ದೇವೆ. ಈ ಹಿಂದೆ ನಾನು ಪಾಟೀಲರನ್ನು ವರ್ಣಿಸಿದಂತೆ ಅವರೊಂದು ಮರವಾಗಿ ಅಲ್ಲಿ ನಿಂತಿದ್ದಾರೆ.

ನಾನು ಮತ್ತು ಪಾಟೀಲರಿಬ್ಬರೂ ಹಂಚಿಕೊಂಡ ಗೊಂದಲಗಳಿಗೆ ಹಾಗೂ ಪಾಟೀಲರು ಎತ್ತಿದ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರವನ್ನು ಅಥವಾ ಪರಿಹಾರವನ್ನು ಕಂಡುಕೊಂಡು ಪಾಟೀಲರ ಬಳಿ ಹೋಗುವ ಅವಕಾಶ ನನಗೆ ಮತ್ತೆ ಬಂದಿತು. ೨೦೦೮ರಲ್ಲಿ ನಮ್ಮ ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರದ ಅರಿವು ಉಪನ್ಯಾಸವನ್ನು ಮಲ್ಲಾಡಿಹಳ್ಳಿಯಲ್ಲಿ ಏರ್ಪಡಿಸಿದ್ದೆವು. ೨೦೦೯ರಲ್ಲಿ ಒಂದು ಸಂಶೋಧನಾ ಕಾರ್ಯಾಗಾರವನ್ನು ಅಲ್ಲಿ ನಡೆಸಿದೆವು. ೨೦೧೧ರಲ್ಲೂ ನಮ್ಮ ಹೊಸ ವಾದಗಳನ್ನು ಕುರಿತು ಒಂದು ಕಾರ್ಯಾಗಾರವನ್ನು ಏರ್ಪಡಿಸಿದ್ದೆವು. ಬಾಲಗಂಗಾಧರ ಅವರ ವಾದವು ಪಾಟೀಲರ ಸಮಸ್ಯೆಗಳಿಗೆ ವಿವರಣೆಯನ್ನು ಒದಗಿಸುತ್ತದೆ ಎಂಬುದನ್ನು ನಾನು ಕಂಡುಕೊಂಡಿದ್ದರಿಂದ ಅದನ್ನು ಅವರಲ್ಲಿ ಹಂಚಿಕೊಳ್ಳಲು ಮರೆಯಲಿಲ್ಲ. ಆದರೆ ಅವರಿಗೆ ಪ್ರಗತಿಪರರ ನಿಲುವಿನ ಕುರಿತು ವಿಮರ್ಶೆಗಳಿದ್ದರೂ ಕೂಡ ಭಾರತದಲ್ಲಿ ಜಾತಿ ವ್ಯವಸ್ಥೆಯಿಲ್ಲ ಎಂಬ ವಾದವನ್ನು ಥಟ್ಟನೆ ಒಪ್ಪಿಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ ಎಂಬುದನ್ನೂ ನಾನು ಗಮನಿಸಿದ್ದೇನೆ. ಅವರು ಈ ಕುರಿತು ನಮ್ಮೊಡನೆ ಸಾಕಷ್ಟು ಜಿಜ್ಞಾಸೆ ನಡೆಸಿದ್ದಾರೆ. ನಮ್ಮ ಕೆಲವು ಕಾರ್ಯಾಗಾರಗಳಿಗೆ ಬಂದು ಚರ್ಚೆಯಲ್ಲಿ ಪಾಲ್ಗೊಂಡಿದ್ದಾರೆ. ಇತ್ತೀಚೆಗೆ ಅವರನ್ನು ಭೇಟಿಮಾಡಿದಾಗ ತೀರಾ ಅವಸರದಲ್ಲೂ ಒಂದರೆಘಳಿಗೆ ಬಿಡುವು ದೊರೆತಾಗ ಜಾತಿ ಎಂದರೇನು ಎಂಬುದರ ಕುರಿತು ತಮ್ಮದೇ ಹೈಪೋಥೀಸಿಸ್ ಒಂದನ್ನು ಉತ್ಸಾಹದಿಂದ ನನ್ನ ಮುಂದಿಟ್ಟರು. ಅಂದರೆ ನನ್ನ ಅವರ ವೈಚಾರಿಕ ಸಂಬಂಧಕ್ಕೆ ಇನ್ನೂ ಭವಿಷ್ಯವಿದೆ ಅಂತಲೇ ಅರ್ಥ. ಅವರ ಈ ಹೈಪೋಥೀಸಿಸ್ ಅದಕ್ಕೆ ಸಾಕ್ಷಿಯಾಗಿ ಚಿಗುರಿದೆ. ಈ ಮರ ದೀರ್ಘಕಾಲ ಚಿಗುರುತ್ತಿರಲಿ ಎಂಬುದೊಂದೇ ನನ್ನ ಹಾರೈಕೆ (ಹಾಗೂ ಸ್ವಾರ್ಥ).